Regd No M 1299 SATYAVADI Founded 1917
The Oldest Newspaper of Mysore



ನನಗೆ ಆಹಾರ ಕೊಡದಿದ್ದರೆ ನಾನು ಪಕ್ಕನೆ ಸಾಯಲಾರೆ, ನನ್ನ ಕಣ್ಣನ್ನೂ ಕುಕ್ಕಿ ತೆಗೆದರೆ ನಾನು ಮಡಿಯಲಾರೆ ಆದರೆ ದೇವರ ಮೇಲಿನ ನನ್ನ ವಿಶ್ವಾಸವನ್ನು ತಪ್ಪಿಸಿದರೆ ನಾನು ಕ್ಷಣ ಕಾಲವೂ ಬಾಳಲಾರೆ. — ಗಾಂಧೀಜಿ.

ಗಾಂಧೀ ಜಯಂತಿಯು

ದೇಶಾದ್ಯಂತ ನೈಭವದಿಂದ
ನೆರವೇರಿಸಲಾಯಿತು

ವಿವಿಧ ವರ್ತಮಾನ

ಆಸ್ಟ್ರೇಲಿಯಾ ವೈಮಾನಿಕ ಸಿಬ್ಬಿ ಕಾರ್ಟರ್ ಹೈದರಾಬಾದಿಗೆ ಇನ್ನೂರು ಜಾರಿಗೆ ಮೇಲ್ಪಟ್ಟ ಪ್ರವಾಸ ಮಾಡಿದ್ದಾರೆ. ಆತ ನೂರು ಟನ್ನಿಗೆ ಮೇಲ್ಪಟ್ಟು ಶಸ್ತ್ರಾಸ್ತ್ರಗಳ ಸಾಗಾಣಿಕೆ ನಡೆಸಿದ್ದಾನೆ ಎಂದು ವರದಿಯಾಗಿದೆ.

ಂ ಂ

ಗಾಂಧೀಜೀ ನಿಧಿಗೆ ಕಾರ್ಮಿಕರ ಉದಾರತೆಯಿಂದ ಕಾಣಿಕೆ ಕೊಡಬೇಕೆಂದು ಕೇಂದ್ರ ಕಾರ್ಮಿಕ ಮಂತ್ರಿ ಶ್ರೀ ಜಗಜೀವನರಾಂ ಪ್ರಾರ್ಥಿಸಿದ್ದಾರೆ.

ಂ ಂ

ಗಡಿ ರಕ್ಷಣೆ ಬಗ್ಗೆ ಭಾರತ ಶಸ್ತ್ರಧಾರಿಯಾಗುವುದೆಂದು ಸರ್ದಾರ್ ಪಟೇಲ್ ತಿಳಿಸಿದ್ದಾರೆ. ಕಾಶ್ಮೀರ ವಿಷಯ ಪ್ರಸ್ತಾಪಿಸುತ್ತಾ ಪಟೇಲ್‌ರವರು ವಿಶ್ವ ಸಂಸ್ಥೆಯು ಭದ್ರತಾ ಸಮಿತಿ ಅಭದ್ರವಾಗಿರುವುದಾಗಿ ತಿಳಿಸಿದರು.

ವುಡ್ ಲ್ಯಾಂಡ್ಸ್

1—10—48ರಿಂದ
ಮೈಸೂರು ಸಂಸ್ಥಾನಕ್ಕೇ
ಪ್ರಥಮ ಪ್ರದರ್ಶನ

Ghar-ki-Izzat

ಮುಂತಾಜ್ ಶಾಂತಿ, ಮನೋರಮ
ದಿಲೀಪಕುಮಾರ್, ಜೀವನ್, ದೀಕ್ಷಿತ್
ಮುಂತಾದವರು ಅಭಿನಯಿಸಿರುವ

ಘರ್-ಕಿ-ಇಜತ್

(ಅತ್ಯಮೋಘ ಹಿಂದಿ ಚಿತ್ರ)
ಪ್ರತಿ ದಿನ 3 ಪ್ರದರ್ಶನಗಳು)

ಸಂಪುಟ 32 ಸಂಚಿಕೆ 20] ಸೋಮವಾರ 4—10—48 [ಬಿಡಿ ಪ್ರತಿ 3

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು

ಹೈದರಾಬಾದ್ ಸಲಹಾ ಸಮಿತಿಗೆ ಸ್ಥಾನಮಾನಗಳೇ ಇಲ್ಲ

ಪಾಕೀಸ್ತಾನದೊಂದಿಗೆ ಶಾಂತಮನೋಭಾವದಿಂದಿರಬೇಕೆಂಬುದೇ ಭಾರತದ ಇಚ್ಛೆ ಎಂದು ಪಂ॥ ನೆಹರು ಶ್ರೀನಗರದಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ರಾಜರು ಮತ್ತು ಪ್ರಜೆಗಳು ಸಮಾನರು ಎಂಬ ಭಾವನೆ ಬರಬೇಕು. ಒಬ್ಬರ ಕಷ್ಟಸುಖಗಳಲ್ಲಿ ಮತ್ತೊಬ್ಬರು ಸಹಕರಿಸಬೇಕು ಎಂದು ನವದೆಹಲಿಯಲ್ಲಿ ಗಾಂಧಿ ದಿನಾಚರಣೆಯಲ್ಲಿ ಭಾಷಣ ಮಾಡುತ್ತಾ ಸರ್ದಾರ್ ಪಟೇಲ್ ತಿಳಿಸಿದ್ದಾರೆ.

ಚಿಟಗಾಂ[illegible]ದರ ಮೇಲೆ ಪೋಲೀಸರು ಗು[illegible]ರಿಸಲಾಗಿ 9 ಮಂದಿ ಸತ್ತರು

ಮಧ್ಯಪ್ರಾಂತ್ಯದ ಪೋಲೀಸ್ ಶಾಖೆಯವರು ಇದುವರೆಗೆ ಗಾಂಧೀಜೀ ನಿಧಿಗೆ ರೂ. 145000 ಕೊಟ್ಟಿದ್ದಾರೆ.

ಹೈದರಾಬಾದ್ ಪತನವಾಗುದ ಮುನ್ನ ರಚನೆಯಾದ ನಿಜಾಂ ಸಲಹಾ ಸಮಿತಿಯ ವಿಚಾರದಲ್ಲಿ ಈಗ ಬಹಿರಂಗವಾದ ಕೆಲವು ವಿವರಗಳ ಪ್ರಕಾರ ಆ ಸಮಿತಿಗೆ ಯಾವ ಅಧಿಕಾರಯುತವಾದ ಸ್ಥಾನಮಾನಗಳೇನೂ ಇಲ್ಲ. ಆ ಸಮಿತಿ ನಿಜಾಂರಿಗೆ ಸಲಹೆ ಮಾತ್ರ ಕೊಡಬಹುದು. ಹೈದರಾಬಾದಿನ ಪೂರ್ಣಾಧಿಕಾರ ಎಮಿಟಿರಿ ಗೌರ್ನರ್ ಅಡಳಿತದಲ್ಲಿರುವುದರಿಂದ ಸಮಿತಿಯೂ ಸಹಾ ಅವರ ಅಂಕೆಯಲ್ಲಿದೆ.

ಪಸ್ತ್ರೀ [illegible] ಬರೊ
ಬ್ಬರು ಬೇಕಾಗಿದ್ದಾರೆ
ಇಲ್ಲಿ ವಿಚಾರಿಸಿ —
ಸತ್ಯವಾದಿ ಕಚೇರಿ,
ವೈಸೂರು.

CITY MUNICIPALITY

MYSORE, Dated 28th September 48.

NOTICE

Notice is hereby given to the inhabitants of ihe Mysore City Municipality that the Municipal Council have resolved to frame the Byelaws for the trade of taxidermant and process of cleaning and preparing hides and skins under Section 51 (i) (b) (iii) and Sec. 181 of the Mysore City Municipalities Act. Any person having any objection in respect of the proposed byelaws may prefer the same in writing to the undersigned within one month from the date of this Notification in the Mysore Official Gazette after which no objection will be heard.

Copies of the draft byelaws may be had in the Municipal Office for reference during office hours.

(Sd) V. K. Mukundam
Municipal Commissioner I/C

ಪ್ರಜಾಪ್ರೀಯ ಪ್ರಭುವರ್ಯರು
ಚಿರಾಯುವಾಗಿರಲಿ

ದ ಸ ರಾ

ವಿಶ್ವಹಬ್ಬಕ್ಕೆ ನಾನು ನನ್ನ ಆಹ್ವಾನ ಪಡೆದೆ ನನ್ನ ಜೀವಿತ ಹರಸಲ್ಪಟ್ಟಿತು. ನನ್ನ ನೇತ್ರಗಳು ಕಾಣಲ್ಪಟ್ಟವು. ನನ್ನ ಕರ್ಣಗಳು ಕೇಳಲ್ಪಟ್ಟವು.

— ಎಂದು ವಿಶ್ವಕವಿ ರವೀ[illegible]
ಸೂರು ದಸರಾ ಮಹೋ[illegible]
ಸುಡಿದಿದ್ದಾರೆ.

ಮೈಸೂರು ಸಂಸ್ಥಾನದ ಅತಿವ ಹಬ್ಬ ದಸರಾ ನಿನ್ನೆಯಿಂದ [illegible]
ವಾಯಿತು.
ಭಾಗ್ಯ

ದಸರಾ ಉತ್ಸವ
ಸೂರು ದಸರಾ [illegible]
ರಂಭೋತ್ಸವವನ್ನು [illegible]
ನಿನ್ನೆ ಬೆಳಿಗ್ಗೆ ನೆರವೇರಿಸಿದರು.

ದಸರಾ ಉತ್ಸವ ವೀಕ್ಷಿಸಲು ಸೂರಿಗೆ ಬಹಳ ಜನ ಬರುತ್ತಿದ್ದಾ

ಶ್ರೀಮನ್ಮಹಾರಾಜರ ಜಂಬೂಸವಾರಿ ಜರುಗಲೇ ಬೇಕೆಂದು ಜನತೆ ಇಚ್ಛಿಸಿರುತ್ತಿರುವುದರಿಂದ ಆ ಬಗ್ಗೆ ಪರಿಶೀಲನೆ ನಡೆಯುತ್ತಿದೆ.

At Opera

ನಿರ್ಭಯ ನಾದಿಯಾ ಅಭಿನಯಿಸಿರುವ

ಹಿಮತ್‌ವಾಲಿ

Morning Shows From 5-10-48
— ಬೆಳಗಿನ ಪ್ರದರ್ಶನ —
ಕುರ್ಸಿದ್, ಸೈಗಾಲ್, ಮುಬಾರಕ್
ಪಾತ್ರವ[illegible]

ಸಂಪುಟ ೭ : ಸಂಚಿಕೆ ೫೫] ॥ ಶ್ರೀ ॥ : ೨೫-10-48

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ ವ. ಸ್ವ. ಸಂಘ

ದ್ವಾರಕಾ ಜಗದ್ಗುರುಗಳವರ ಹೈದರಾಬಾದು ವಿಜಯಕ್ಕಾಗಿ ಗೌರ್ನರ್-ಜನರಲ್ ಮುಂತಾದವರಿಗೆ ದ್ವಾರಕಾ ಜಗದ್ಗುರುಗಳವರ ಅಭಿನಂದನಾ ತಂತಿ

(ಸ್ವಂ. ಸು. ತಂತಿ)

ತೀರ್ಥಹಳ್ಳಿ ಸೆ 29

ಶ್ರೀ ದ್ವಾರಕಾ ಪೀಠದ ಜಗದ್ಗುರುಗಳು ಶ್ರೀ ಶಂಕರಾಚಾರ್ಯ ಸ್ವಾಮಿಗಳವರು, ಭಾರತ ಗೌರ್ನರ್ ಜನರಲ್ ಶ್ರೀ ರಾಜಗೋಪಾಲಾಚಾರ್ಯರಿಗೂ, ಭಾರತ ಮಹಾಪ್ರಧಾನಿ ಪಂ | ನೆಹರೂರವರಿಗೂ ಉಪಪ್ರಧಾನಿಗಳಾದ ಸರದಾರ್ ಪಟೇಲ್ ಮುಂತಾದುವುಗಳೂ ನಡೆಯುತ್ತಿದ್ದು ನವಮಿಯಾದಿನ ಶ್ರೀ ಚಂಡೀ ಹೋಮವೂ ವೈಭವದಿಂದ ನಡೆಯುವುದು.

ನವರಾತ್ರಿ ಮುಗಿದನಂತರ ಶ್ರೀ ಜಗದ್ಗುರುಗಳವರು ಶ್ರೀ ಜಗದ್ಗುರು ಆದ್ಯ ಶಂಕರಾಚಾರ್ಯರವರ ಜನ್ಮ ಸ್ಥಳವಾದ ಶ್ರೀ ಕಾಲಟೀ ಕ್ಷೇತ್ರಕ್ಕೆ ಯಾತ್ರಾರ್ಥವಾಗಿ ದಯಮಾಡಿಸುವವರಾಗಿರುತ್ತಾರೆ.

ಸುಬ್ರಹ್ಮಣ್ಯ ಮಠದ ಸ್ವಾಮಿಗಳವರ ಆಗಮನ

ಸಂಚಾರಾರ್ಥವಾಗಿ ತೀರ್ಥಹಳ್ಳಿಗೆ ದಯಮಾಡಿಸಿದ್ದ ಶ್ರೀ ಸು ಬ್ರ ಹ್ಮ ಣ್ಯ ಮಠಾಧೀಶ್ವರರಾದ ಶ್ರೀ ವಿದ್ಯಾಸಿಂಧು ತೀರ್ಥ ಸ್ವಾಮಿಗಳವರು ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ ಮುಳುಬಾಗಿಲು ಕೃಷ್ಣಾನಂದ ಮ-ಠಕ್ಕೆ ಭಾದ್ರಪದ ಬಹುಳ ಅಷ್ಟಮಿ ಭಾನುವಾರ ಬೆಳಿಗ್ಗೆ 8 ಘಂಟೆಗೆ ಚಿತ್ತೈಸಲು ಶ್ರೀ ಮಠದ ಅಧಿಕಾರಿಗಳು, ವಾದ್ಯ ಪೂರ್ಣಕುಂಭಾದಿ ಮರ್ಯಾದೆಗಳೊಡನೆ ಎದುರುಗೊಂಡು ಶ್ರೀ ಮಠದಲ್ಲಿ ಶ್ರೀ ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರು ಸುಬ್ರಹ್ಮಣ್ಯದ ಶ್ರೀ ಶ್ರೀಗಳವರನ್ನು ಸ್ವಾಗತಿಸಿದರು

ಆಗಮಿಸಿದ ಸುಬ್ರಹ್ಮಣ್ಯ ಸ್ವಾಮಿಗಳವರಿಗೆ ಶ್ರೀ ಮಠದ ಕಡೆಯಿಂದ ಸಂಪ್ರದಾಯದಂತೆ ಸ್ವಾಗತ ಪೂಜೆ ನಡೆಯಿತು, ಮಧ್ಯಾಹ್ನ ಉಭಯ ಕಡೆಗಳಲ್ಲಿಯೂ ಪೂಜೆ ಮಂಗಳಾರತಿ ನಂತರ ಸಂತರ್ಪಣೆ ನಡೆಯಿತು. ಸಾಯಂಕಾಲ ಪೂಜಾದಿಗಳು ನಡೆದು ನವಮಿಯಾ ಸೋಮವಾರದ ದಿನ ಬೆಳಿಗ್ಗೆ ಸುಬ್ರಹ್ಮಣ್ಯ ಸ್ವಾಮಿಗಳವರಿಗೆ ಹಾರತಾವಿ ಸತ್ಕಾರಗಳನ್ನು ನಡೆಸಿದನಂತರ ಅವರನ್ನು ಮರ್ಯಾದೆಯಿಂದ ಭೀಮನಕಟ್ಟೆಗೆ ಬೀಳ್ಕೊಡಲಾಯಿತು.

ನವರಾತ್ರಿ ಮಹೋತ್ಸವ — ಮತ್ತು — ಜಗದ್ಗುರುಗಳವರ ಕಾರ್ಯಕ್ರಮ

ಭಾದ್ರಪದ ಶುದ್ಧ ಪಾಡ್ಯ ಶನಿವಾರ ಶ್ರೀ ದ್ವಾರಕಾ ಸಂಸ್ಥಾನ ಮುಳುಬಾಗಿಲು ಶ್ರೀ ಕೃಷ್ಣಾನಂದ ಮಠಾಧೀಶ್ವರ ಶ್ರೀ ಜಗದ್ಗುರುಗಳವರ ಚಾತುರ್ಮಾಸ್ಯ ವ್ರತವು ಮುಳುಬಾಗಿಲಿನ ತಮ್ಮ ಶ್ರೀ ಮ-ಠದಲ್ಲಿ ಮುಗಿಯಿತು.

ಆಶ್ವಿಜ ಶುದ್ಧ ೧ (ತಾ॥ 3-10-48 ರಿಂದ ಶ್ರೀ ಮಠದಲ್ಲಿ ನವರಾತ್ರಿ ಮಹೋತ್ಸವವು ಎಂದಿನಂತೆ ವೈಭವದಿಂದ ನಡೆಯುವುದು,

ಪ್ರಥಮ ನವರಾತ್ರಿ ಅಂದರೆ ಪಾಡ್ಯ ಆದಿತ್ಯವಾರ ಶ್ರೀ ಜಗದ್ಗುರುಗಳವರ ಜನ್ಮದಿನವಾಗಿದ್ದು ಶ್ರೀ ಮಠದಲ್ಲಿ ವಿಶೇಷ ಕಾರ್ಯಕ್ರಮಗಳು ನಡೆಯುವುವು.

ನವರಾತ್ರಿ ೯ ದಿನಗಳೂ ಅನೇಕ ಸಾರಾಯಣಗಳೂ ತ್ರಿಕಾಲ ಪೂಜಾ ಅಷ್ಟಾವಧಾನ ಸೇವಾದಿಗಳೂ ಸಂತರ್ಪಣೆಯೂ ನಡೆಯುತ್ತಿದ್ದು ನವಮಿಯಾ ದಿನ ಶ್ರೀ ಚಂಡೀ ಹೋಮವೂ ವೈಭವದಿಂದ ನಡೆಯುವುದು.

ನವರಾತ್ರಿ ಮುಗಿದನಂತರ ಶ್ರೀ ಜಗದ್ಗುರುಗಳವರು ಶ್ರೀ ಜಗದ್ಗುರು ಆದ್ಯ ಶಂಕರಾಚಾರ್ಯರವರ ಜನ್ಮ ಸ್ಥಳವಾದ ಶ್ರೀ ಕಾಲಟೀ ಕ್ಷೇತ್ರಕ್ಕೆ ಯಾತ್ರಾರ್ಥವಾಗಿ ದಯಮಾಡಿಸುವವರಾಗಿರುತ್ತಾರೆ.

ಈ ವಾರದ ಭವಿಷ್ಯ

ಓಂ ಜ್ಯೋತಿಷ್ಯರಿಂದ

ಮೇಷ— ದುಡಿತ ಹೆಚ್ಚು ಫಲ ಕಡಮೆ ವ್ಯವಹಾರದಲ್ಲಿ ವ್ಯಸನ

ವೃಷಭ....ಕೈಗೊಂಡ ಕಾರ್ಯಗಳು ನಡೆಯುತ್ತವೆ ; ಸತ್ಸಂಗದ ಲಾಭವಿದೆ

ಮಿಥುನ — ವ್ಯವಹಾರದಲ್ಲಿ ಪ್ರಗತಿ ಖರ್ಚು ವೆಚ್ಚ ಸಾಧಾರಣ

ಕರ್ಕಾಟಕ— ಧನ ಜಸರ ಬೆಂಬಲವಿದೆ : ಆದರೆ ವ್ಯವಹಾರದಲ್ಲಿ ಶತ್ರು ಭಯವಿದೆ.

ಸಿಂಹ— ಚಿಂತೆ ಇರುವುದಿಲ್ಲ, ಧನ ಲಾಭವಿರುತ್ತದೆ, ಮನಸ್ಥಿರವಾಗಿರುವುವುದಿಲ್ಲ

ಕನ್ಯಾ— ಹಣವಿಲ್ಲದವನ ಸ್ಥಿತಿಯೆ ಹೆಣಕ್ಕೂ ಕೇಳು ಎನ್ನುವಂತೆ ನಿಮ್ಮ ಸ್ಥಿತಿ ಇದೆ. ಆದರೂ ನಿರಾಶರಾಗಬೇಡಿ

ತುಲಾ—ಮನೋರೋಗವು ಹೆಚ್ಚು ಆದರೆ ವ್ಯವಹಾರದಲ್ಲಿ ಕಾರ್ಯಗಳು ಜಯವಾಗುವದರಿಂದ ಮನಸ್ಸಿಗೆ ಸ್ವಲ್ಪ ಸಮಾಧಾನ ತೋರುತ್ತದೆ.

ವೃಶ್ಚಿಕ— ಕೀರ್ತಿಪ್ರದವಾದ ವಾದ ಶತ್ರುಗಳ ಮೇಲೆ ವಿಜಯವನ್ನು ಗಳಿಸವಿ ; ವ್ಯವಹಾರದಲ್ಲಿ ಅನುಕೂಲಗಳ ಹೆಚ್ಚುವವು

ಧನಸ್ಸು— ಕಾರ್ಯಸಿದ್ಧಿಯಾಗುತ್ತದೆ, ಕಲಹಗಳ ಭಯವಿರದು.

ಮಕರ— ಜಯಿಗಳಿಂದ ಕೂಡಿದ ವಾರ, ವಿಶ್ರಾಂ ಭೇಟಿಯಾಗುತ್ತದೆ, ಕೈಕೊಂಡ ಕಾರ್ಯಗಳು ಹೆಚ್ಚು ಶ್ರಮವಿಲ್ಲದೆ ಸಿದ್ಧಿಯಾಗುತ್ತವೆ

ಕುಂಭ— ಆರೋಗ್ಯವಿರುವದಿಲ್ಲ : ದುಡ್ಡಿನ ತಾಪತ್ರಯವಿರುವದಿಲ್ಲ, ವ್ಯವಹಾರದಲ್ಲಿ ತೊಂದರೆ ಹೆಚ್ಚು

ಮೀನ—ಇಷ್ಟ ಸಿದ್ಧಿ ವ್ಯಾಪಾರಾಭಿವೃದ್ಧಿಯ ವಾರ

Save the Cow

Edited, Printed and Published by M S Krishna Rao at Satyavadi Press, Chan